ಇಬ್ಬರನ್ನೂ ಕಾಡಿತ್ತು.

ಅರಮನೆಯ ಕಲಾಮಂಟಪವನ್ನು ನೋಡಿದ ರಾಜಾ ರವಿವರ್ಮ 'ಮಹಾರಾಜರೇ ನಿಮ್ಮ ಅರಮನೆಯಲ್ಲಿ ವೆನಿಷಿಯನ ಗೊಥಿಕ್ ಶೈಲಿಯಲ್ಲಿ ಕಟ್ಟಿರುವ ಕಮಾನುಗಳು, ತುಂಬಾ ಸುಂದರವಾಗಿವೆ. ಕಲಾಮಂಟಪವು ಕೂಡ ವಿಶಾಲವಾಗಿ ಅದ್ಭುತವಾಗಿದೆ. ಆದರೆ ಈ ಭವ್ಯ ಅರಮನೆಯ ಒಳಸಭಾಂಗಣವನ್ನು ಎಷ್ಟು ಜನಸಾಮಾನ್ಯರು ನೋಡಲು ಸಾಧ್ಯ? ಇಲ್ಲಿ ಕಲಾದೇವತೆ ಬಂಧಿಯಾಗುವಳಲ್ಲವೆ?' ಎಂದರು. ನಾನು 'ಮತ್ತೇನು ಮಾಡುವುದು ವರ್ಮಾಜಿ ನಾನು ಚಿತ್ರಗಳನ್ನು ಇಲ್ಲಿ ಹಾಕಲು ತಾನೆ ಮಾಡಿಸಿದ್ದು?'

ರವಿವರ್ಮರು ನಸುನಗುತ್ತಾ 'ಇಲ್ಲಿಯೇ ಹಾಕೋಣ, ಆದರೆ ಅದಕ್ಕೆ ಮೊದಲು ನಿಮ್ಮ ಬರೋಡಾ ಜನತೆಗೆ ಒಂದು ಸಾರ್ವಜನಿಕ ಚಿತ್ರಕಲಾಪ್ರದರ್ಶನ ಏರ್ಪಡಿಸಿ; ಜನರೆಲ್ಲಾ ನೋಡಿ ಆನಂದಿಸಲಿ, ನಂತರ ಚಿತ್ರಪಟಗಳನ್ನು ಇಲ್ಲಿ ಹಾಕೋಣ' ಎಂದರು. ದಿವಾನ್ ಮಾಧವರಾಯರ ನೆನಪಾಯಿತು. ಅವರು ಹೀಗೆಯೇ ನನ್ನ ಆತುರವನ್ನು ಪ್ರತಿಭಟಿಸಿ, ಅಮೂಲ್ಯ ಸಲಹೆಗಳನ್ನು ನೀಡುತ್ತಿದ್ದರು. ಅದಕ್ಕೆ ಹಿರಿಯರು ಹೇಳುವುದು ಅನುಭವಸ್ಥರ ಸಲಹೆ ಪಡೆಯಬೇಕೆಂದು. ರವಿವರ್ಮರ ಸಲಹೆ ನನಗೂ ಒಪ್ಪಿಗೆಯಾಯಿತು. ಅದೇ ವಾರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ರವಿವರ್ಮರ ಚಿತ್ರಗಳ ಪ್ರದರ್ಶನ ಏರ್ಪಡಿಸಿದೆ. ಅಸಂಖ್ಯಾತ ಜನರು ಬಂದು ಆನಂದಿಸಿ ಹೋದರು. ಹಲವರಂತೂ ಅದೊಂದು ದೇವಾಲಯವೋ ಎಂಬಂತೆ ಹಣವನ್ನು ದೇವದೇವಿಯರ ಚಿತ್ರಪಟಗಳ ಮುಂದೆ ಚೆಲ್ಲಿ ಹೋಗುತ್ತಿದ್ದರು.

ಪ್ರದರ್ಶನ ಮುಗಿದ ಮೇಲೆ ಅದೇ ಚಿತ್ರಪಟಗಳನ್ನು, ಅರಮನೆಯ ಕಲಾಮಂದಿರದಲ್ಲಿ ಹಾಕಲಾಯಿತು. ರವಿವರ್ಮರೇ ಖುದ್ದಾಗಿ ಯಾವ್ಯಾವ ಪಟ ಎಲ್ಲೆಲ್ಲಿ ಬರಬೇಕೆಂದು ನಿರ್ಧರಿಸಿದರು. ಹಂಸ ದಮಯಂತಿ, ನಳ ದಮಯಂತಿ, ಸಿಂಹದ ಮರಿಯೊಂದಿಗೆ ಭರತ, ಶಂತನು ಗಂಗೆ, ಕಂಸ ಮರ್ಧನ ಕೃಷ್ಣ, ಕೀಚಕ ಸೈರಂಧ್ರಿ, ಸೀತಾ ಸ್ವಯಂವರ, ವಿಶ್ವಾಮಿತ್ರಮೇನಕೆ, ಶಕುಂತಲೆಯ ಜನನ, ದುಷ್ಯಂತಶಕುಂತಲೆ, ಯಶೋದ ಕೃಷ್ಣ, ದ್ರೌಪದಿ ವಸ್ತ್ರಾಪಹರಣ, ಚಿತ್ರಗಳನ್ನೆಲ್ಲಾ ಆ ವಿಶಾಲವಾದ ಗ್ಯಾಲರಿಯಲ್ಲಿ ತೂಗು ಹಾಕಿದಾಗ ಅವುಗಳಿಗೆ ಹೊಸದೊಂದು ರೂಪವೇ ಬಂದಂತಾಯಿತು.

ರವಿವರ್ಮರ ಪರಿಶ್ರಮಕ್ಕೆ ನಾನು ಕೊಟ್ಟ ಉಡುಗೊರೆ ಸಾಟಿಯೇನಲ್ಲ. ಆದರೂ ಅರಮನೆಯ ಮರ್ಯಾದೆಯೆಂದು 50,000 ರೂಪಾಯಿಗಳನ್ನು ಜೊತೆಗೆ ಲಂಡನ್‌ನಿಂದ ಆಮದು ಮಾಡಲ್ಪಟ್ಟ ನ್ಯೂಟನ್ ಕಂಪೆನಿಯ ಬ್ರಷ್‌ಗಳು, ಬಣ್ಣಗಳು (ನೇಪಲ್ಸ್ ಹಳದಿ, ಟೆರ್ರಾಸೇನಿಯಾ, ಅಲ್ಟ್ರಾಮೆರೈನ್, ಗಾರ್ಮ್‌ಬೋಸ್, ಬೋಗ್, ಪರ್ಷಿಯನ್ ಬ್ಲೂ) ತುಂಬಿದ ಒಂದು ತೇಗ ಮರದ ಪೆಟ್ಟಿಗೆ ಕೊಟ್ಟೆ. ವರ್ಮಾಜಿಯ ಕಣ್ಣು ತೇವವಾಯಿತು.

## ಇಲ್ಲಿಯವರೆಗೆ

ರವಿವರ್ಮ ಬರೋಡಾದಲ್ಲಿದ್ದಾಗ ದಿವಾನ್ ಮಾಧವರಾಯರು 'ಮಹಾರಾಜ ವಿಶಾಖ ತಿರುನಾಳರು ಕಾಶಿಗೆ ಹೋಗುವುದಕ್ಕಾಗಿ ಬಂದಿದ್ದು, ಬೊಂಬಾಯಿಯಲ್ಲಿ ತಂಗಿದ್ದಾರೆ. ಅವರನ್ನು ಹೋಗಿ ಭೇಟಿಯಾಗಿ' ಎನ್ನುತ್ತಾರೆ. ಇದರಿಂದ ರವಿವರ್ಮನಿಗೆ ಸಿಟ್ಟು ಬರುತ್ತದೆ. 'ನಾನೇಕೆ ಅವರನ್ನು ಭೇಟಿಯಾಗಬೇಕು?' ಎಂದು ಪ್ರಶ್ನಿಸುತ್ತಾನೆ. ಆಗ ಮಾಧವರಾಯರು, 'ಎಷ್ಟಾದರೂ ಅವರು ತಿರುವನಂತಪುರ ಮಹಾರಾಜರಾಗಿದ್ದು, ನಿಮ್ಮನ್ನು ಸನ್ಮಾನಿಸಿದ ಸಂಸ್ಥಾನದವರು' ಎನ್ನುತ್ತಾರೆ. ದಿವಾನರ ಮಾತಿಗೆ ಬೆಲೆ ಕೊಟ್ಟು ಬೊಂಬಾಯಿಯಲ್ಲಿ ರವಿವರ್ಮ ಮಹಾರಾಜರನ್ನು ಭೇಟಿಯಾದಾಗ ಮಹಾರಾಜ ವಿಶಾಖ ತಿರುನಾಳರು ಕೊಂಕು ನುಡಿಯುತ್ತಾರೆ.

ಈ ಮಧ್ಯೆ ರವಿವರ್ಮನಿಗೆ ಸುಗಂಧಾಳ ನಿಸ್ವಾರ್ಥ ಪ್ರೀತಿ ಪ್ರೇಮದಿಂದ ಆಕೆಯನ್ನೇ ಮದುವೆಯಾಗೋಣ ಎನಿಸುವಷ್ಟು ಪ್ರೀತಿ ಉಕ್ಕಿ ಹರಿಯುತ್ತದೆ. ಪತ್ನಿ ಪುರತಾರ್ಥಿಯಲ್ಲಿ ಕಾಣದ ಪ್ರೇಮ ಸುಗಂಧಾಳಲ್ಲಿ ಕಾಣುತ್ತದೆ. ರೂಪದರ್ಶಿಯಾಗಿ ಬಂದ ಸುಗಂಧಾಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದಾಗ 'ನನ್ನನ್ನು ಮದುವೆಯಾಗುವುದು ಸರಿಯಲ್ಲ, ನಾನು ರಾಧೆ. ನಿಮ್ಮ ನೆನಪಿನಲ್ಲೇ ಬದುಕುತ್ತೇನೆ' ಎನ್ನುತ್ತಾಳೆ. ಮುಂದೆ ರವಿವರ್ಮನಿಗೆ ಮೈಸೂರು ಅರಮನೆಯವರ ಪ್ರತಿರೂಪ ಚಿತ್ರ ಬರೆಯಲು ಆಹ್ವಾನ ಕಳುಹಿಸಿದ್ದರು ಮಹಾರಾಜ ಚಾಮರಾಜ ಒಡೆಯರ್.

ಹೊರಡುವ ದಿನ ಅವರನ್ನು ರೈಲು ಹತ್ತಿಸಲು ಹೊರಟ ಹೊಸ ದಿವಾನರ ಬಳಿ ನಾನೊಂದು ಎರಡೇ ಸಾಲಿನ ಪತ್ರ ಬರೆದು ಕಳುಹಿಸಿದೆ. 'ಪ್ರಿಯ ರಾಜಾಜೀ, ಕಲಾಕಾರರಲ್ಲಿ ನೀವೊಬ್ಬ ರಾಜಕುವರರು; ರಾಜಕುವರರಲ್ಲಿ ನೀವೊಬ್ಬರು ಅಸಾಮಾನ್ಯ ಕಲಾಕಾರರು. ನಿಮ್ಮ ಪ್ರೀತಿಯ ಸಯ್ಯಾಜಿರಾವ್.'

### ರವಿವರ್ಮ

ನಾನು ಬರೋಡಾದಿಂದ ಹಿಂತಿರುಗುವಷ್ಟರಲ್ಲಿ ನನಗೆ ಮತ್ತೊಂದು ಆಘಾತ ಕಾದಿತ್ತು. ನನ್ನ ಪತ್ನಿ ಪುರತಾರ್ಥಿಯ ಸಾವಿನ ಸುದ್ದಿ ಬಂದಿತ್ತು. ಕ್ಷಣಹೊತ್ತು ಕಣ್ಮುಚ್ಚಿ ಕುಳಿತೆ. ನನ್ನ ಬದುಕಿನಲ್ಲಿ ಸುಳಿದುಹೋದ ಹೆಂಗಸರನ್ನು ಒಮ್ಮೆ ನೆನೆಸಿಕೊಂಡೆ. ನನ್ನನ್ನು ಅತೀವವಾಗಿ ಪ್ರೀತಿಸಿದ, ನನಗೆ ಸ್ವಾದ ತುಂಬಿದ ಅಡುಗೆ ಮಾಡಿ ಬಡಿಸಿದ, ನೃತ್ಯ ಸಂಗೀತಗಳನ್ನು ಕಲಿಸಿದ, ನನ್ನ ಬದುಕಿಗೇ ಒಂದು ಊರುಗೋಲಾಗಿದ್ದ ಆ ತಾಯಿಯನ್ನು ಕಳೆದುಕೊಂಡದ್ದು ನನಗೆ ತುಂಬಲಾರದ ನಷ್ಟ.

ಅನಿರೀಕ್ಷಿತವಾಗಿ ನನ್ನ ಪತ್ನಿಯಾಗಿ ಬಂದ ಪುರತಾರ್ಥಿ ಸುಂದರಿಯಲ್ಲದಿದ್ದರೂ ಶೀಲವಂತೆ. ನನ್ನನ್ನು ಮೀರೆ ಮೀರಿ ಪ್ರೀತಿಸಿದ್ದರಿಂದಲೇ ಅವಳು ಹಾಗೆ ವರ್ತಿಸುತ್ತಿದ್ದುದು. ನನ್ನನ್ನು ಬಿಟ್ಟು ಮತ್ತೋರ್ವರ ಸಂಗ ನೆನೆಯದ, ನನಗಾಗಿ ತಿಂಗಳುಗಳು ಕಾಯುವ ಅವಳ ಶೀಲವೇ ಅವಳ ಸೌಂದರ್ಯ. ಆದರೆ ಅವಳ ರಾಜ ಮನೆತನದ ಅಹಂಭಾವ, ಪರಸ್ತ್ರೀಯರನ್ನು ಕುರಿತಾದ ಮಾತ್ಸರ್ಯ, ಮೂಗಿನ ತುದಿಯಲ್ಲೇ ತಲೆದೋರುತ್ತಿದ್ದ ಕೋಪ, ಸಿಡುಕು, ನನ್ನನ್ನು ಕಿಂಚಿತ್ತೂ ಅರ್ಥ ಮಾಡಿಕೊಳ್ಳದ ಅವಳ ವ್ಯಕ್ತಿತ್ವ ನನಗೊಂದು ಒಗಟಾಗಿಯೇ ಉಳಿಯಿತು. ಸೀತೆ ಸಾವಿತ್ರಿಯರಂತೆ ಪತಿಯನ್ನು ಹಿಂಬಾಲಿಸಿ, ಜೊತೆಗೆ ಬದುಕದ ಪುರತಾರ್ಥಿ, ನನಗೆ ಪತ್ನಿ ನೀಡಬಹುದಾದ ಯಾವ ಹಿತವನ್ನು ನೀಡಲಿಲ್ಲ ಎಂಬುದೇ ಸತ್ಯ. ಅವಳು ಹೆತ್ತುಕೊಟ್ಟ ಮೂವರು ಮಕ್ಕಳಷ್ಟೆ ಈಗ ನನ್ನ ಆಸ್ತಿ, ನನ್ನ ಕುಟುಂಬ.

ಸುಗಂಧ ಎಂದಿನಂತೆ ರೂಪದರ್ಶಿಯಾಗಿ ನಿಲ್ಲಲು ಬಂದಳು. 'ಈ ದಿನ ನನ್ನಿಂದ ಸಾಧ್ಯವಿಲ್ಲ ಸುಗಂಧ' ಎಂದೆ. 'ಏಕೆ? ಆರೋಗ್ಯ ಸರಿಯಿಲ್ಲವೆ?' ಹತ್ತಿರ ಬಂದು ಮೈಮುಟ್ಟಿ ನೋಡಿದಳು. 'ಇಲ್ಲಮ್ಮ, ನನಗಿಂದು ಮನಸ್ಸು ಸರಿಯಿಲ್ಲ, ನನ್ನ ಪತ್ನಿ ಅಸುನೀಗಿದಳು.' ಕ್ಷಣಹೊತ್ತು ಸುಮ್ಮನಿದ್ದ ಸುಗಂಧ ಕೇಳಿದಳು 'ಮಾವೇಲ್ಲಿಕರಾಗೆ ಹೋಗುತ್ತೀರಾ?' 'ಇಲ್ಲ ಸುಗಂಧ, ನನಗಲ್ಲಿ ಯಾರೂ ಇಲ್ಲ. ಮಕ್ಕಳು ಈಗಾಗಲೇ ಅಲ್ಲಿಂದ ಕಿಳಿಮಾನೂರಿಗೆ ಬಂದಿದ್ದಾರೆ. ಇನ್ನೇನು ಇಲ್ಲಿಗೇ ಬರುತ್ತಾರೆ.' 'ನಾನು ನಿಮ್ಮ ಬದುಕಿನಲ್ಲಿ ಬಂದಿದ್ದರಿಂದ ನಿಮ್ಮ ನಿಮ್ಮ ಪತ್ನಿಯ ನಡುವೆ ವಿರಸಕ್ಕೆ ಎಡೆಯಾಯಿತೇನೋ!'

'ಹಾಗೇನಿಲ್ಲ ಸುಗಂಧ, ಅವಳ ಸ್ವಭಾವವೇ ಅನುಮಾನದ್ದು; ಮಾತ್ಸರ್ಯ ತುಂಬಿದ್ದು. ಹಿಂದೆ ಕಾಮಿನಿ ಎಂಬ ನಾಯರ್ ಸ್ತ್ರೀ ನನ್ನ ರೂಪದರ್ಶಿಯಾಗಿದ್ದಾಗ ಕೂಡ ಕೋಪಗೊಂಡು ಅವಳನ್ನು ಓಡಿಸಿದ್ದಳು. ನನ್ನ ನಿನ್ನ ಕುರಿತಾದ ಸತ್ಯವನ್ನೇ ಅವಳಿಗೆ ಹೇಳಿದ್ದೆ. ಆದರೆ ನೀನಲ್ಲದೆ ಇನ್ಯಾರಿದ್ದರೂ ಅವಳು ಶಾಂತಿಯಿಂದೇನೂ ಇರುತ್ತಿರಲಿಲ್ಲ,

ಎಲ್ಲವನ್ನೂ ಅನುಸರಿಸಿಕೊಂಡು ಹೋಗದ ಅವಳ ವ್ಯಕ್ತಿತ್ವವೇ ಅವಳಿಗೆ ಶತ್ರುವಾಯಿತು. ನನ್ನನ್ನೂ ದುಃಖದ ಮಡುವಿಗೆ ತಳ್ಳಿತು. ಈ ದಿನ ನೀನು ಬಂದದ್ದು ಒಳ್ಳೆಯದೇ ಆಯ್ತು. ಪ್ರತಿಫಲಾಪೇಕ್ಷೆಯಿಲ್ಲದೆ ನನ್ನನ್ನು ನಿಸ್ವಾರ್ಥವಾಗಿ ಪ್ರೀತಿಸುವ ನಿನ್ನ ತೋಳ್ಗಳಲ್ಲಿ ಮಲಗಲು ನನ್ನನ್ನು ಅನುಮತಿಸು ಸುಗಂಧ. ನನ್ನನ್ನು ಸಂತೈಸು, ನಿನ್ನ ಪ್ರೀತಿಯ ಮುಲಾಮು ಹಚ್ಚು.'

ಸುಗಂಧ ಅವಳ ನಳಿದೋಳ್ಗಳಲ್ಲಿ ನನ್ನನ್ನು ಅಪ್ಪಿ ತೊಡೆಯ ಮೇಲೆ ಮಲಗಿಸಿಕೊಂಡಳು. ಕೂದಲಲ್ಲಿ ಬೆರಳಾಡಿಸುತ್ತಾ ಹಣೆಯನ್ನು ಮುದ್ದಿಸಿದಳು. ನನ್ನ ತಾಯಿಯ ಮಡಿಲಲ್ಲಿ ಮಲಗಿದಂತೆ ಹಿತವಾಗಿತ್ತು ಅವಳ ಮಡಿಲು. ನನ್ನ ದುಃಖವನ್ನು ಮರೆತು ಮಲಗಿದೆ.